ಮುಂಜಾವು

ವಾರಪತ್ರಿಕೆ.

ಸಂಪಾದಕ: ಸುಬ್ರಮಣಿ ನಾಗರಾಜ್

'MUNJAVU' Kannada Weekly. KOPPA - CHM. ಫೊ ೯೯:14

5ನೇ ವರ್ಷ 34ನೇ ಸಂಚಿಕೆ ಕೊಪ್ಪ 17-5-1987 ಭಾನುವಾರ ಬೆಲೆ 50 ಪೈಸೆ

ಗೋವಿಂದ ಗೌಡರ ಆಯ್ಕೆ ಪ್ರಶ್ನಿಸಿದ್ದ ಅರ್ಜಿ ವಜಾ

ಕೊಪ್ಪ : 1985 ರಲ್ಲಿ ನಡೆದ ರಾಜ್ಯ ವಿಧಾನಸಭಾ ಚುನಾವಣೆಯಲ್ಲಿ ಶೃಂಗೇರಿ ಕ್ಷೇತ್ರದಿಂದ ಕೇವಲ 83 ಮತಗಳ ಅಂತರದಲ್ಲಿ ಗೆದ್ದಿದ್ದ ಎಚ್. ಜಿ. ಗೋವಿಂದ ಗೌಡರ ಆಯ್ಕೆಯನ್ನು ಪ್ರಶ್ನಿಸಿ ಕಾಂಗ್ರೆಸ್ ಅಭ್ಯರ್ಥಿ ಯು. ಕೆ. ಶಾಮಣ್ಣ ಸಲ್ಲಿಸಿದ್ದ ಅರ್ಜಿಯನ್ನು ಹೈಕೋರ್ಟ್ ತಳ್ಳಿಹಾಕಿ, ಆಯ್ಕೆಯನ್ನು ಕ್ರಮಬದ್ಧವೆಂದು ಘೋಷಿಸಿರುವುದಾಗಿ ಜನತಾ ಪಕ್ಷದ ಮೂಲಗಳು ತಿಳಿಸಿವೆ

ರಾಷ್ಟ್ರೀಯ ಓಪನ್ ಅಥ್ಲೆಟಿಕ್ಸ್ :

ಈಶನ್‌ಗೆ ಶಾಟ್‌ಪುಟ್ 'ಬೆಳ್ಳಿ'

ಮಂಗಳೂರು: ಇಲ್ಲಿ ಮೇ 7ರಿಂದ 10 ರವರೆಗೆ ಅತ್ಯಂತ ಯಶಸ್ವಿಯಾಗಿ ನಡೆದ ರಾಷ್ಟ್ರೀಯ ಓಪನ್ ಅಥ್ಲೆಟಿಕ್ಸ್ ಸ್ಪರ್ಧೆಗಳಲ್ಲಿ .ದ. ರೈಲ್ವೆಯನ್ನು ಪ್ರತಿನಿಧಿಸುವ ಕೊಪ್ಪದ ಎಸ್. ಡಿ. ಈಶನ್ ಶಾಟ್‌ಪುಟ್‌ನಲ್ಲಿ ಬೆಳ್ಳಿ ಪದಕ ಪಡೆದರು.

ಸ್ವರ್ಣ ಗೆದ್ದ ಸ್ಟೀಲ್ ಪ್ಲಾಂಟ್‌ನ ಬಲ್ವಿಂದರ್ ಸಿಂಗ್ 17 71 ಮೀ. ದೂರಕ್ಕೆ ಗುಂಡನ್ನು ಎಸೆದರೆ ಈಶನ್ 17.07 ಮೀ ದೂರ ಎಸೆದರು ಮೂರನೇ ಸ್ಥಾನ ಪಡೆದ ಸ್ಟೀಲ್ ಪ್ಲಾಂಟ್‌ನ ಇಕ್ಬಾಲ್ ಸಿಂಗ್ 17.01 ಮೀ. ಸಾಧಿಸಿದರು.

ಆದರೆ ಈ ವರೆಗಿನ ರಾಷ್ಟ್ರೀಯ ದಾಖಲೆಯಾಗಿರುವ 18.56 ಮೀ. ಗಿಂತ ಇವೆಲ್ಲ ಬಹಳ ಹಿಂದೆ ಇವೆ. ಅಲ್ಲದೆ ಕಳೆದ ವರ್ಷ 18 30 ಮೀ. ದೂರ ಎಸೆದು ಸ್ವರ್ಣ ಗೆದ್ದಿದ್ದ ಬಹಾದುರ್ ಸಿಂಗ್ ಈ ಬಾರಿ 3 ಎಸೆತಗಳಲ್ಲೂ ಫೌಲ್ ಆಗಿ ಸ್ಪರ್ಧೆಯಿಂದ ಹೊರಗುಳಿಯ ಬೇಕಾಯಿತು. ಆದರೂ ಈ ಬಾರಿಯ ಕೂಟದಲ್ಲಿ ಯಾವುದೇ ಸ್ಪರ್ಧೆಗಳಲ್ಲೂ ಒಂದೇ ಒಂದು ಹೊಸ ದಾಖಲೆಯೂ ಸ್ಥಾಪನೆಯಾಗದಿರುವುದನ್ನು ಗಮನಿಸಿದರೆ ಈ ಸಾಧನೆಗಳು ಗಮನಾರ್ಹ ಎಂಬುದರಲ್ಲಿ ಸಂಶಯವಿಲ್ಲ.

ಕೊಪ್ಪದ ಇನ್ನೊಬ್ಬ ಕ್ರೀಡಾಪಟು, ಚಿಕ್ಕಮಗಳೂರು ಕ್ರೀಡಾ ಹಾಸ್ಟೆಲ್‌ನ ಜೆ. ಎಸ್. ಗೀತಾ ಭಾಗವಹಿಸಬೇಕಿದ್ದ, ಮಹಿಳೆಯರ 5000 ಮೀ. ಓಟದ ಪಂದ್ಯವನ್ನು ವ್ಯವಸ್ಥಾಪಕರು ರದ್ದುಗೊಳಿಸಿದ್ದರಿಂದ ಆಕೆ ಯಾವುದೇ ಸ್ಪರ್ಧೆಯಿಲ್ಲದೆ ಕ್ರೀಡಾಕೂಟ ವೀಕ್ಷಿಸಿ ವಾಪಸಾಗಬೇಕಾಯಿತು.

ಸಾರ್ವಜನಿಕ ವಿದ್ಯಾರ್ಥಿ ನಿಲಯಗಳಿಗೆ ಅರ್ಜಿ ಆಹ್ವಾನ

ಶೃಂಗೇರಿ : ಈ ತಾಲ್ಲೂಕಿನಲ್ಲಿ ನಡೆಯುತ್ತಿರುವ ಹಿಂದುಳಿದ ವರ್ಗಗಳ ಮತ್ತು ಅಲ್ಪ ಸಂಖ್ಯಾತರ ಬಾಲಕರ ವಿದ್ಯಾರ್ಥಿ ನಿಲಯ ಹಾಗೂ ಪರಿಶಿಷ್ಟ ಜಾತಿ ಮತ್ತು ವರ್ಗಗಳ ಬಾಲಕಿಯರ ವಿದ್ಯಾರ್ಥಿನೀ ನಿಲಯಕ್ಕೆ 1987-88 ನೇ ಸಾಲಿಗೆ 5 ರಿಂದ 10 ನೇ ತರಗತಿಯವರೆಗೆ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿ-ವಿದ್ಯಾರ್ಥಿನಿಯರಿಂದ ಅರ್ಜಿ ಕರೆಯಲಾಗಿದೆ.

ಅರ್ಜಿ ಫಾರಂಗಳು, ಶೃಂಗೇರಿ ಕ್ಷೇತ್ರಾಭಿವೃದ್ಧಿ ಅಧಿಕಾರಿಗಳ ಕಛೇರಿಯಲ್ಲಿ ದೊರೆಯುತ್ತವೆ. ಅರ್ಜಿಯೊಂದಿಗೆ ಜಾತಿ, ಆದಾಯ ಸರ್ಟಿಫಿಕೇಟ್ ಮತ್ತು ಅಂಕಪಟ್ಟಿ ಲಗತ್ತಿಸಿರಬೇಕು. ಜಾತಿ ಸರ್ಟಿಫಿಕೇಟನ್ನು ಹೊಸ ವಿಂಗಡಣಾತಿ ನಿಯಮಗಳಂತೆ ಗುಂಪು-ಎ, ಬಿ, ಸಿ, ಡಿ, ಇ, ನಮೂನೆಯಲ್ಲಿ ಭರ್ತಿಗೊಳಿಸಿ ಕೊಡಬೇಕು.

ಭರ್ತಿ ಮಾಡಿದ ಅರ್ಜಿಗಳನ್ನು ಕ್ಷೇತ್ರಾಭಿವೃದ್ಧಿ ಅಧಿಕಾರಿಗಳ ಕಛೇರಿಗೆ ದಿನಾಂಕ 1-6-87 ರ ಒಳಗೆ ಸಲ್ಲಿಸಬೇಕು.

ಬಿಳಾಲುಕೊಪ್ಪದಲ್ಲಿ ಯಶಸ್ವಿ ಸಾಮೂಹಿಕ ವಿವಾಹ

ಬಿಳಾಲುಕೊಪ್ಪ : ಇಲ್ಲಿನ ಮಾರುತಿ ಜೇಸೀಸ್ ಆಶ್ರಯದಲ್ಲಿ, ಸರ್ಕಾರದ ತಾಳಿ ಭಾಗ್ಯ ಯೋಜನೆಯಡಿ 11 ಜೊತೆ ಮದುವೆಗಳ ಸಾಮೂಹಿಕ ಕಾರ್ಯಕ್ರಮ ಮೇ 7ರಂದು ನೆರವೇರಿತು. ಜಿಲ್ಲಾಧಿಕಾರಿ ಅನಿತಾ ಕೌಲ್ ಮಾಂಗಲ್ಯಗಳನ್ನು ವಿತರಿಸಿ ನೂತನ ವಧೂವರರಿಗೆ ಶುಭ ಹಾರೈಸಿದರು. ತಹಸೀಲ್ದಾರ್ ಆರ್. ಶ್ರೀನಿವಾಸ್ ಸೀರೆ-ಪಂಚೆ ವಿತರಿಸಿದರು. ಕ್ಷೇತ್ರಾಭಿವೃದ್ಧಿ ಅಧಿಕಾರಿ ಪಿ. ಬಾಲಪ್ಪ, ಬಿ.ಎನ್. ಭಾಸ್ಕರ್, ಕೆ. ಆರ್. ಚಂದ್ರಶೇಖರ್ ಮುಖ್ಯ ಅತಿಥಿಗಳಾಗಿದ್ದರು. ಜೇಸಿ ಅಧ್ಯಕ್ಷ ಬಿ. ರಮೇಶ್ ರಾವ್ ಅಧ್ಯಕ್ಷತೆ ವಹಿಸಿದ್ದರು.

ಸರಳವಾಗಿ, ಅಚ್ಚುಕಟ್ಟಾಗಿ ನಡೆದ ವಿವಾಹ ಸಮಾರಂಭದ ನಂತರ ಸುಮಾರು 800 ಜನರಿಗೆ ಅನ್ನ ಸಂತರ್ಪಣೆ ನಡೆಯಿತು.

ಈ ಕಾರ್ಯಕ್ರಮದ ಯಶಸ್ಸಿಗೆ ಇಲ್ಲಿನ ಯುವಕ ಸಂಘ, ಯುವತಿ ಮಂಡಳಿ ಮತ್ತು ಮಹಿಳಾ ಸಮಾಜದವರೂ ಸಕ್ರಿಯವಾಗಿ ಸಹಕರಿಸಿದರು.

ಇದೇ ಸಂಸ್ಥೆ ಕಳೆದ ವರ್ಷ 17 ಜೊತೆ ವಿವಾಹಗಳನ್ನು ನೆರವೇರಿಸಿತ್ತು. ಈ ವರ್ಷ ಇನ್ನೂ ಹಲವೆಡೆ ನಡೆದ ಸಾಮೂಹಿಕ ವಿವಾಹಗಳಿಂದಾಗಿಯೋ ಏನೋ, ಈ ಸಂಖ್ಯೆ ಈ ಬಾರಿ ಕಮ್ಮಿಯಾದರೂ ಇಲ್ಲಿನ ವ್ಯವಸ್ಥೆ, ಸೌಕರ್ಯ ಮುಂತಾದುವು ಸುತ್ತಮುತ್ತಲ ಜನತೆಯಲ್ಲಿ ಬಹಳವಾಗಿ ಪ್ರಭಾವ ಬೀರಿದ್ದು, ಮುಂದೆ ಇಂಥ ಕಾರ್ಯಕ್ರಮಕ್ಕೆ ಇಲ್ಲಿ ವಿಶೇಷ ಬೇಡಿಕೆ ಇರುವುದೆಂದು ನಿರೀಕ್ಷಿಸಲಾಗಿದೆ.

ಕಳೆದ ವರ್ಷ ಇದೇ ಕಾರ್ಯಕ್ರಮಕ್ಕಾಗಿ ಈ ಜೇಸಿ ಘಟಕಕ್ಕೆ ರಾಜ್ಯ ಮಟ್ಟದಲ್ಲಿ "ವರ್ಷದ ಅತ್ಯುತ್ತಮ ಸಾರ್ವಜನಿಕ ಸಂಪರ್ಕ ಕಾರ್ಯಕ್ರಮ" ಎಂಬುದಾಗಿ ಪ್ರಶಸ್ತಿ ಬಂದಿತ್ತು.

ಆದಿತ್ಯ ಫೈನಾನ್ಸ್‌ನಿಂದ ಜಿಲ್ಲೆಯಲ್ಲಿ 28 ಲಕ್ಷ ರೂ. ಸಂಗ್ರಹ (ಮತ್ತು ಗುಳುಂ?!)

ಚಿಕ್ಕಮಗಳೂರು : ಕಳೆದ 20 ತಿಂಗಳಿಂದ ಜಿಲ್ಲೆಯ ವಿವಿಧೆಡೆ ಶಾಖೆಗಳನ್ನು ತೆರೆದಿದ್ದ ಆದಿತ್ಯ ಫೈನಾನ್ ಸಂಸ್ಥೆ 9000 ಜನರಿಂದ ಸುಮಾರು 28 ಲಕ್ಷ ರೂ. ಗಳನ್ನು ಸಂಗ್ರಹಿಸಿತ್ತೆಂದು ಒಂದು ಅಂದಾಜು ತಿಳಿಸಿದೆ.

ಕೊಪ್ಪದಲ್ಲಿ ಸುಮಾರು ಒಂದೂವರೆ ಲಕ್ಷ ರೂ., ನ. ರಾ. ಪುರದಲ್ಲಿ ಸುಮಾರು ನಾಲ್ಕುವರೆ ಲಕ್ಷ ರೂ. ಗಳನ್ನು ಸಂಗ್ರಹಿಸಲಾಗಿತ್ತೆಂದು ಅನಧಿಕೃತ ಅಂದಾಜುಗಳು ಹೇಳಿವೆ.

ತಮ್ಮ ಠೇವಣಿ ಹಣವನ್ನು ಹಿಂದಿರುಗಿಸುವಂತೆ ಒತ್ತಾಯಿಸಿ ಈ ಸಂಸ್ಥೆಯ ವಿರುದ್ಧ ಅಲ್ಲಲ್ಲಿ ಪ್ರತಿಭಟನೆ, ಚಳುವಳಿ ನಡೆಸಿದ ಜನ ಈಗ ಸ್ಥಳೀಯ ಏಜೆಂಟರುಗಳನ್ನು ಮುತ್ತತೊಡಗಿದ್ದಾರೆನ್ನಲಾಗಿದೆ.

ಕೇರಂ ಟೂರ್ನಿ

ಕೊಪ್ಪ: ಇಲ್ಲಿನ ಯುವಕ ಕೇಂದ್ರದಲ್ಲಿ 24 5.87ನೇ ಭಾನುವಾರ ಶೃಂಗೇರಿ, ಕೊಪ್ಪ, ತೀರ್ಥಹಳ್ಳಿ ತಾ||ಗಳ ಯುವಕ-ಯುವತಿಯರ ಕೇರಂ ಡಬಲ್ಸ್ ಮತ್ತು ಸಿಂಗಲ್ಸ್ ಟೂರ್ನಮೆಂಟನ್ನು ಏರ್ಪಡಿಸಿದೆ. ಡಬಲ್ಸ್‌ಗೆ 10 ರೂ. ಸಿಂಗಲ್ಸ್‌ಗೆ 5 ರೂ ಪ್ರವೇಶ ಧನ. ಅರ್ಜಿ ಸಲ್ಲಿಸಲು ಕಡೇ ದಿನ 22-5-87. ವಿವರಗಳಿಗೆ ಸಂಪರ್ಕಿಸಿ: ತಾ|| ಯುವಜನ ಕೇಂದ್ರ, ಕೊಪ್ಪ ಅಥವಾ ಸರ್ವೋದಯ ಯುವಕ ಸಂಘ, ಬಾಳಗಡಿ, ಕೊಪ್ಪ.

ಕೊಪ್ಪ ರೋಟರಿ ಸಂಸ್ಥೆ ಆಶ್ರಯದಲ್ಲಿ

ಉಚಿತ ದಂತ ಚಿಕಿತ್ಸಾ ಶಿಬಿರ

ಕೊಪ್ಪ : ಇಲ್ಲಿನ ರೋಟರಿ ಕ್ಲಬ್ ಉಚಿತ ದಂತ ಚಿಕಿತ್ಸಾ ಶಿಬಿರವೊಂದನ್ನು 31-5-1987 ನೇ ಭಾನುವಾರ ಬೆಳಿಗ್ಗೆ 10 ಗಂಟೆಯಿಂದ ಸಂಜೆ 4 ರವರೆಗೆ ಪುರಭವನದ ಆವರಣದಲ್ಲಿ ವ್ಯವಸ್ಥೆಗೊಳಿಸಿದೆ.

ಮಣಿಪಾಲ ಕಸ್ತೂರಬಾ ಮೆಡಿಕಲ್ ಕಾಲೇಜಿನ ದಂತ ಚಿಕಿತ್ಸಾ ವಿಭಾಗದ ತಜ್ಞರ ತಂಡ ಈ ಶಿಬಿರದಲ್ಲಿ ಭಾಗವಹಿಸಲಿದ್ದಾರೆ.

ಪರೀಕ್ಷೆ, ಸಲಹೆ ಮತ್ತು ಚಿಕಿತ್ಸೆಗಳಲ್ಲದೆ ಮೈನರ್ ಶಸ್ತ್ರ ಚಿಕಿತ್ಸೆಗಳನ್ನು ನಡೆಸಲಾಗುವುದು. ದೊಡ್ಡ ಪ್ರಮಾಣದ ಶಸ್ತ್ರ ಚಿಕಿತ್ಸೆಗಳ ಅಗತ್ಯವಿದ್ದಲ್ಲಿ ಮಣಿಪಾಲಕ್ಕೆ ಶಿಫಾರ್ಸು ಮಾಡಲಾಗುವುದು. ಅಂಥ ಸಂದರ್ಭದಲ್ಲಿ ರೋಟರಿ ನೆರವು ನೀಡುವುದು.

ಅಗತ್ಯವಿರುವವರೆಲ್ಲರೂ ಈ ಶಿಬಿರದ ಪ್ರಯೋಜನ ಪಡೆಯಬೇಕೆಂದೂ, ಶಿಬಿರದ ದಿನ ಅಲ್ಲೇ ತಮ್ಮ ಹೆಸರನ್ನು ದಾಖಲು ಮಾಡಬಹುದೆಂದೂ ಸಂಸ್ಥೆ ತಿಳಿಸಿದೆ.

ನೂತನ ಎಸ್ಪಿ ಅಧಿಕಾರ ಸ್ವೀಕಾರ

ಚಿಕ್ಕಮಗಳೂರು : ಈ ಜಿಲ್ಲೆಯ ನೂತನ ಪೋಲಿಸ್ ಮುಖ್ಯಾಧಿಕಾರಿಯಾಗಿ ಓಂಪ್ರಕಾಶ್ ಅವರು ಮೇ 14 ರಂದು ಬಿಪಿನ್ ಗೋಪಾಲ ಕೃಷ್ಣ ಅವರಿಂದ ಅಧಿಕಾರ ವಹಿಸಿಕೊಂಡರು.

ಚರಿತ್ರಾರ್ಹ ಕಾನೂನು

ಅಂತರಜಾತಿ ವಿವಾಹವಾದವರ ಮಕ್ಕಳಿಗೆ ಮೀಸಲಾತಿ ನೀಡುವ ಸಂಬಂಧದಲ್ಲಿ ತಮಿಳುನಾಡು ಸರ್ಕಾರ ಈಚೆಗೆ ಕ್ರಾಂತಿಕಾರಿ ಕಾನೂನು ಮಾಡಿದೆ. ಅಲ್ಲಿನ ಹೈಕೋರ್ಟು ಈ ಕಾನೂನನ್ನು ಎತ್ತಿ ಹಿಡಿದು ಚರಿತ್ರಾರ್ಹ ತೀರ್ಪು ನೀಡಿದೆ.

"ಅಂತರಜಾತಿ ವಿವಾಹವಾದವರ ಮಕ್ಕಳಿಗೆ ತಾಂತ್ರಿಕ ಶಿಕ್ಷಣ ಸಂಸ್ಥೆಗಳಲ್ಲಿ ವಿಶೇಷ [ಮೀಸ]ಲಾತಿ ದೊರಕುತ್ತದೆ. ಪರಿಶಿಷ್ಟಜಾತಿ ಅಥವಾ ಪಂಗಡಕ್ಕೆ ಸೇರಿದ ತಂದೆ ಅಥವಾ ತಾಯಿ ಇರುವ ಮಕ್ಕಳಿಗೆ ಪ್ರಥಮ ಆದ್ಯತೆ. ಹಿಂದುಳಿದ ಜಾತಿಗೆ ಸೇರಿದ ತಂದೆ ಅಥವಾ ತಾಯಿ ಇರುವ ಮಕ್ಕಳಿಗೆ ಎರಡನೇ ಆದ್ಯತೆ. ಇತರ ಅಂತರಜಾತಿ ವಿವಾಹವಾದವರ ಮಕ್ಕಳಿಗೆ ಮೂರನೇ ಆದ್ಯತೆ.

ತಮಿಳುನಾಡು ಸರ್ಕಾರ ಇತ್ತೀಚೆಗೆ ಜಾರಿಗೆ ತಂದಿರುವ ಕ್ರಾಂತಿಕಾರಿ ಕಾಯ್ದೆಯ ಸಾರಾಂಶ ಇದು.

ಅಂತರಜಾತಿ ವಿವಾಹವಾಗಿ ಜನಿಸಿದ ಮಕ್ಕಳಾದ ಹರಿಗಣೇಶ್ ಮತ್ತು ರಮೇಶ್ ಸೋದರರು ಈ ಕಾಯ್ದೆಯನ್ನು ಪ್ರಶ್ನಿಸಿ ತಮಿಳು ನಾಡು ಹೈಕೋರ್ಟಿನಲ್ಲಿ ಮೊಕದ್ದಮೆ ಹೂಡಿದರು. "ಅಂತರಜಾತಿ ವಿವಾಹವಾದವರ ಮಕ್ಕಳಿಗೆ ಶೈಕ್ಷಣಿಕ ಸಂಸ್ಥೆಗಳಲ್ಲಿ ಮೀಸಲಾತಿ ಜಾರಿಗೆ ತಂದಿರುವ ಈ ಕಾಯ್ದೆ ಸ್ವಾಗತಾರ್ಹವಾದರೂ ಈ ಆದ್ಯತೆಗಳೇಕೆ?" ಎಂಬುದು ಅರ್ಜಿದಾರರ ವಾದದ ಮುಖ್ಯಾಂಶ.

ಅರ್ಜಿದಾರರ ವಾದ ಹಾಗೂ ತಮಿಳುನಾಡು ಸರ್ಕಾರದ ಪ್ರತಿವಾದಗಳನ್ನು ಆಲಿಸಿದ ಹೈಕೋರ್ಟು ಚರಿತ್ರಾರ್ಹ ತೀರ್ಪು ನೀಡಿದೆ.

"ಈ ಕಾಯ್ದೆಯ ಮುಖ್ಯ ಉದ್ದೇಶ ಪರಿಶಿಷ್ಟ ಜಾತಿ ಅಥವಾ ಪಂಗಡ ಹಾಗೂ ಅನ್ಯ ಜಾತಿಗಳ ನಡುವಣ ಕಂದರವನ್ನು ನಾಶಗೊಳಿಸುವುದೇ ಆಗಿದೆ.

"ಪರಿಶಿಷ್ಟ ಜಾತಿ ಅಥವಾ ಪಂಗಡಕ್ಕೆ ಸೇರಿದ ತಂದೆ ಅಥವಾ ತಾಯಿ ಇರುವ ಮಕ್ಕಳು ಮತ್ತು ಇತರ ಅಂತರಜಾತಿ ವಿವಾಹವಾದವರ ಮಕ್ಕಳನ್ನು ಸರಿಸಮಾನವಾಗಿ ಪರಿಗಣಿಸುವುದು ನ್ಯಾಯವಲ್ಲ. ಆದ್ದರಿಂದ ಪರಿಶಿಷ್ಟಜಾತಿ ಅಥವಾ ಪಂಗಡಕ್ಕೆ ಸೇರಿದ ತಂದೆ ಅಥವಾ ತಾಯಿ ಇರುವ ಮಕ್ಕಳಿಗೆ ಪ್ರಥಮ ಆದ್ಯತೆ ನೀಡಬೇಕೆಂಬುದು ರಾಜ್ಯ ಸರ್ಕಾರದ ಆಶಯ. ಸಂವಿಧಾನದ 46 ಹಾಗೂ 17ನೇ ವಿಧಿಗಳೂ ಈ ಆಶಯವನ್ನು ಅನುಮೋದಿಸುತ್ತವೆ.

"ಈ ಆದ್ಯತೆ ಇಲ್ಲದೇ ಹೋದರೆ ಈ ಕಾಯ್ದೆಯ ಪ್ರಯೋಜನವು ಇತರ ಅಂತರ್ಜಾತಿ ವಿವಾಹವಾದವರ (ಮುಂದುವರಿದ ಜಾತಿಗಳಲ್ಲೇ ಅಲ್ಪ ಸ್ವಲ್ಪ ವ್ಯತ್ಯಾಸವಿರುವಂಥ ಜಾತಿಗಳೊಳಗೆ ಮದುವೆಯಾಗಿರುವವರು) ಮಕ್ಕಳಿಗೇ ದೊರಕೀತು ಎಂಬ ಸರ್ಕಾರದ ಆತಂಕದಲ್ಲಿ ಹುರುಳಿದೆ. ಆದ್ದರಿಂದ ಸಾಮಾಜಿಕ ನ್ಯಾಯ ದೃಷ್ಟಿಯ ಈ ಆದ್ಯತೆ ನ್ಯಾಯವಾಗಿಯೇ ಇದೆ"

ಶತಮಾನಗಳಿಂದ ವಂಚಿತರಾಗಿರುವ ಜನಸಮುದಾಯಗಳ ಪಾಲಿಗೆ ಅತ್ಯಂತ ಕ್ರಾಂತಿಕಾರಿಯಾಗಿರುವ ತೀರ್ಪು ಇದು.

ಜಾತಿಪದ್ಧತಿಯ ವಿರುದ್ಧ ಅಪ್ರತಿಮ ಸಮರ ಸಾರಿದ ಡಾ॥ ರಾಮಮನೋಹರ ಲೋಹಿಯಾ ಅವರೂ ಸೇರಿದಂತೆ ಹಲವಾರು ಜನ ಚಿಂತನಶೀಲರು, ವಿವಿಧ ಹಿಂದುಳಿದ ವರ್ಗಗಳ ಆಯೋಗಗಳು ಅಂತರಜಾತಿ ವಿವಾಹವಾದವರ ಮಕ್ಕಳಿಗೆ ಮೀಸಲಾತಿ ಸೌಲಭ್ಯ ಒದಗಿಸಬೇಕೆಂದು ಅಭಿಪ್ರಾಯಪಟ್ಟಿವೆ.

ತಮಿಳುನಾಡು ಸರ್ಕಾರ ಇಂಥ ಕಾಯ್ದೆ ರೂಪಿಸಿ ಜಾರಿಗೆ ತಂದಿದ್ದೂ ಅಲ್ಲದೇ ಪರಿಶಿಷ್ಟ ಜಾತಿ ಅಥವಾ ಪಂಗಡಕ್ಕೆ ಸೇರಿದ ತಂದೆ ಅಥವಾ ತಾಯಿ ಇರುವ ಮಕ್ಕಳಿಗೆ ಪ್ರಥಮ ಆದ್ಯತೆಯನ್ನು ನಿಗದಿಪಡಿಸುವ ಮೂಲಕ ಮಹಾನ್ ಕ್ರಾಂತಿಕಾರಿ ಹೆಜ್ಜೆ ಇಟ್ಟಿದೆ.

ಕೇಂದ್ರ ಸರ್ಕಾರ ಹಾಗೂ ಇತರ ರಾಜ್ಯ ಸರ್ಕಾರಗಳಿಗೆ ಸಾಮಾಜಿಕ ಅಸಮಾನತೆಯ ವಿರುದ್ಧ ಯುದ್ಧ ಸಾರುವ ಬಗೆಗೆ ಕೊಂಚವಾದರೂ ಕಾಳಜಿಯಿದ್ದಲ್ಲಿ ಇಂಥ ಕಾಯ್ದೆಯನ್ನು ರೂಪಿಸಿ ಜಾರಿಗೆ ತರಬೇಕು.

● **ಪ್ರೊ॥ ರವಿವರ್ಮಕುಮಾರ್**

(ಸೌಜನ್ಯ : ಸುದ್ದಿ ಸಂಗಾತಿ)

ಕರ್ನಾಟಕದಲ್ಲಿ......?

ಕರ್ನಾಟಕದಲ್ಲಿ ಸಹ ವಿಚಾರವಂತರು, ಪ್ರಗತಿಪರ ಚಿಂತಕರು ಹಲವಾರು ವರ್ಷಗಳಿಂದ ಇಂಥದೊಂದು ಕಾಯ್ದೆ ರೂಪಿಸುವಂತೆ ಸರ್ಕಾರವನ್ನು ಒತ್ತಾಯಿಸುತ್ತಲೇ ಇದ್ದಾರೆ. ತಾಂತ್ರಿಕ ಶಿಕ್ಷಣದಲ್ಲಿ ಮಾತ್ರವಲ್ಲ, ಉದ್ಯೋಗದಲ್ಲೂ ಮೀಸಲಾತಿ ಬೇಕೆಂಬುದು ಅವರ ಬೇಡಿಕೆ.

ಆದರೆ ಕರ್ನಾಟಕದಲ್ಲಿ ನೇಮಿತವಾದ ಯಾವುದೇ ಹಿಂದುಳಿದ ವರ್ಗಗಳ ಆಯೋಗವೂ ಈ ಬಗ್ಗೆ ಗಮನ ಹರಿಸಿಲ್ಲ. ಈಚೆಗೆ ವರದಿ ಸಲ್ಲಿಸಿ ವಿವಾದಕ್ಕೊಳಗಾಗಿದ್ದ ವೆಂಕಟಸ್ವಾಮಿ ಆಯೋಗಕ್ಕೆ ಕೂಡ ಈ ಬಗ್ಗೆ ಲಿಖಿತ ಮನವಿಯನ್ನೇ ಸಲ್ಲಿಸಲಾಗಿತ್ತಾದರೂ ಆಯೋಗ ಅದಕ್ಕೆ ಯೋಗ್ಯ ಗಮನ ಕೊಟ್ಟಿಲ್ಲ.

ನಾಡಿನ ಅಗ್ರ ಪಂಕ್ತಿಯ ಲೇಖಕರೂ ಚಿಂತಕರೂ ಆದ ಪೂರ್ಣಚಂದ್ರ ತೇಜಸ್ವಿಯವರು ಈಚೆಗೊಮ್ಮೆ ಈ ವಿಷಯ ತಿಳಿಸುತ್ತಾ, "ಇಂಥ ಮೀಸಲಾತಿ ಕೇವಲ 2% ಇದ್ದರೂ ಸಾಕು. ಅದ್ಭುತವಾದ ಬದಲಾವಣೆಯನ್ನು ನಿರೀಕ್ಷಿಸಬಹುದು. ನೋಡಿ!" ಎಂದರು.

ಅಷ್ಟೇ ಅಲ್ಲ, "ಈ ಬೇಡಿಕೆ ಇಂದು ರಾಜ್ಯಾದ್ಯಂತ ಎಲ್ಲ ಪ್ರಗತಿ ಪರರ ಅತಿ ತುರ್ತಿನ, ಅತಿ ಮುಖ್ಯ ಬೇಡಿಕೆಯಾಗಬೇಕಾಗಿದೆ. ಅದು ಜಾರಿಗೆ ಬಂತೆಂದರೆ, ಜಾತಿ ವ್ಯವಸ್ಥೆಯನ್ನು ಮುರಿಯುವತ್ತ ಅತ್ಯಂತ ಪ್ರಬಲವಾದ ಅಸ್ತ್ರವೊಂದನ್ನು ನಾವು ಸಂಪಾದಿಸಿದಂತಾಗುತ್ತದೆ" ಎಂದೂ ಅವರೆನ್ನುತ್ತಾರೆ.

ಈ ದಿಕ್ಕಿನಲ್ಲಿ ಈಗಾಗಲೇ ಹಲವಡೆ ಚಿಂತನೆ ಆರಂಭವಾಗಿದ್ದು, ಬೇಗನೇ ಇದೊಂದು ಸಂಘಟಿತ ರೂಪು ಪಡೆಯುವ ಸಾಧ್ಯತೆಗಳೂ ಇಲ್ಲದಿಲ್ಲ.

—ಸಿರಿಮನೆ ನಾಗರಾಜ್

ಬೆಳೆ, ಜಾನುವಾರು, ಆಸ್ತಿ-ಪಾಸ್ತಿ ರಕ್ಷಣೆಗಾಗಿ ರೈತರಿಗೆ ಅತ್ಯಗತ್ಯ — 'ಸಾಮಾನ್ಯ ವಿಮೆ'

ಎಂ.ಆರ್. ಸಂಪತ್‌ಕುಮಾರ್

ಮನೆ, ಅಂಗಡಿ ಮತ್ತಿತರ ಆಸ್ತಿ-ಪಾಸ್ತಿಗಳಿಗೆ, ವಾಹನಗಳಿಗೆ, ಜಾನುವಾರುಗಳಿಗೆ, ಬೆಳೆಗಳಿಗೆ ಮುಂತಾದುವುಗಳಿಗೆ ಆಕಸ್ಮಿಕವಾಗಿ ನಷ್ಟವಾಗುವುದರ ವಿರುದ್ಧ ಹಾಗೂ ಅಪಘಾತದ ವಿರುದ್ಧ ವಿಮೆಯ ರಕ್ಷಣೆ ನೀಡುವುದು ಸಾಮಾನ್ಯ ವಿಮೆ. ಜೀವವಿಮೆಗೆ ನಮ್ಮ ದೇಶದಲ್ಲಿ ಸಂಪೂರ್ಣ ಸರ್ಕಾರದ ಸ್ವಾಮ್ಯಕ್ಕೊಳಪಟ್ಟ ಜೀವ ವಿಮಾ ಕಾರ್ಪೊರೇಶನ್ (ಎಲ್. ಐ. ಸಿ.) ಇರುವಂತೆಯೇ ಸಾಮಾನ್ಯ ವಿಮೆಗೂ ಜನರಲ್ ಇನ್‌ಶೂರೆನ್ಸ್ ಕಾರ್ಪೊರೇಶನ್ (ಜಿ. ಐ. ಸಿ.) ಎಂಬುದಿದ್ದು, ಯುನೈಟೆಡ್ ಇಂಡಿಯಾ, ನ್ಯೂ ಇಂಡಿಯ, ನ್ಯಾಶನಲ್ ಮತ್ತು ಓರಿಯಂಟಲ್ ಎಂಬ ನಾಲ್ಕು ಅಂಗ ಸಂಸ್ಥೆಗಳನ್ನು ಹೊಂದಿದೆ.

ಈ ಸಂಸ್ಥೆಗಳ ವಹಿವಾಟಿಗೆ ಕೇಂದ್ರ ಸರ್ಕಾರದ ಪೂರ್ಣ ಖಾತರಿಯಿದ್ದು, ವಿಮೆ ಮಾಡಿಸುವವರ ಅವಶ್ಯಕತೆಗಳನ್ನು ಗಮನದಲ್ಲಿಟ್ಟುಕೊಂಡು ರೂಪಿಸಲಾದ ಹಲವಾರು ಯೋಜನೆಗಳು ಚಾಲ್ತಿಯಲ್ಲಿವೆ. ಇಲ್ಲಿ ರೈತರಿಗೆ ಬಹಳ ಉಪಯುಕ್ತವಾಗಬಲ್ಲ ಕೆಲವು ಯೋಜನೆಗಳನ್ನು ಸಂಕ್ಷಿಪ್ತವಾಗಿ ಪರಿಚಯಿಸಲಾಗಿದೆ.

1) ಜಾನುವಾರು ವಿಮೆ : ಇದರನ್ವಯ ದನ, ಕರು, ಎಮ್ಮೆ, ಎತ್ತು, ಕೋಳಿ ಕುರಿ, ನಾಯಿ, ಹಂದಿ-ಇತ್ಯಾದಿ ಯಾವುದೇ ಸಾಕು ಪ್ರಾಣಿಗೆ, ಅದರ ಬೆಲೆ ನಿಷ್ಕರ್ಷೆಗೆ ತಕ್ಕಂತೆ ವಿಮೆ ಮಾಡಬಹುದು. ಜನ ಸಾಮಾನ್ಯರಲ್ಲಿ ಪ್ರಾಣಿಗಳ ಕಿವಿಗೆ ಹಾಕಿದ, ಹಿತ್ತಾಳೆಯ ಕಂಪೆನಿ ನಂಬರ್ ನೋಡಿದೊಡನೆ 'ಲೋನಿನ ಜಾನುವಾರು' ಎಂಬ ಅಭಿಪ್ರಾಯ ಇದೆ. ಇದು ತಪ್ಪು. ಯಾವುದೇ ಸಾಲವಿಲ್ಲದಾಗಲೂ ತಮ್ಮ ಸ್ವಂತ ಜಾನುವಾರುಗಳಿಗೆ ವಿಮೆ ಮಾಡಬಹುದು.

2) ಬೇಸಾಯ ಉಪಕರಣಗಳು : ಟ್ರ್ಯಾಕ್ಟರ್, ಟಿಲ್ಲರ್, ಪಂಪ್‌ಸೆಟ್ (ಡೀಸೆಲ್, ಸೀಮೆಯೆಣ್ಣೆ, ವಿದ್ಯುತ್ ಚಾಲಿತ), ಸ್ಪ್ರಿಂಕ್ಲರ್ ಸೆಟ್‌ಗಳು, ಸ್ಪ್ರೇಯರ್ ಮುಂತಾದ ಎಲ್ಲಾ ತರದ ಕೃಷಿ ಉಪಕರಣಗಳಿಗೂ ವಿಮೆ ಮಾಡಿಸಬಹುದು.

3) ಗೃಹೋಪಯೋಗಿ ಉಪಕರಣಗಳು : ಕಳ್ಳತನ, ದೊಂಬಿ, ಬೆಂಕಿ, ನೈಸರ್ಗಿಕ ವಿಕೋಪ (ಪ್ರವಾಹ, ಚಂಡಮಾರುತ ಇತ್ಯಾದಿ) ಮುಂತಾದ ಕಾರಣಗಳಿಂದ ಮನೆ, ಅಂಗಡಿ, ಯಂತ್ರೋಪಕರಣಗಳು, ನಗನಟ್ಟುಗಳು, ಸೈಕಲ್, ಟಿ.ವಿ., ಗ್ರೈಂಡರ್—ಇತ್ಯಾದಿ ಎಲ್ಲಾ ರೀತಿಯ ವಸ್ತುಗಳು ಮತ್ತು ಆಸ್ತಿ-ಪಾಸ್ತಿಗಳಿಗೆ ಹಾನಿ ಆಗುವುದರ ವಿರುದ್ಧ ವಿಮೆ ಮಾಡಬಹುದು

4) ಜನತಾ ಅಪಘಾತ ವಿಮೆ : ಇದರನ್ವಯ ಒಬ್ಬ ವ್ಯಕ್ತಿ ವಾರ್ಷಿಕವಾಗಿ ಕೇವಲ 12 ರೂ. ಅಥವಾ 3 ವರ್ಷಕ್ಕೆ 30 ರೂ. ಅಥವಾ 5 ವರ್ಷಕ್ಕೆ 45 ರೂ. ಸಂದಾಯ ಮಾಡಿ ವಿಮೆ ಮಾಡಿಸಿದ್ದು, ಯಾವುದೇ ರೀತಿ ಅಪಘಾತಕ್ಕೀಡಾಗಿ ಅಸು ನೀಗಿದರೆ ಅಥವಾ ಬದುಕಿ ಉಳಿದರೂ ಕೆಲಸ ಮಾಡಲು ಅನರ್ಹರಾದರೆ ಪೂರ್ಣ 15 ಸಾವಿರ ರೂ.ಗಳನ್ನು, ಅಂಗ ವಿಕಲತೆ ಉಂಟಾದರೆ ಅದರ ತೀವ್ರತೆಗೆ ತಕ್ಕಂತೆ ನಿರ್ಧರಿಸಿ ಮೊತ್ತವನ್ನು ನೀಡಲಾಗುವುದು.

5) ಗ್ರಾಮೀಣ ಅಪಘಾತ ವಿಮೆ : ಮೇಲೆ ಹೇಳಿದಂತೆ ವಾರ್ಷಿಕವಾಗಿ 12ರೂ.ಗಳನ್ನು ಸಹ ಕೊಡಲಾರದವರಿಗಾಗಿ ಈ ವಿಮಾ ಸೌಲಭ್ಯ ಇದೆ. ವರ್ಷಕ್ಕೆ 6 ರೂ., 3 ವರ್ಷಕ್ಕೆ ರೂ. 12-50 ಹಾಗೂ 5 ವರ್ಷಕ್ಕೆ 19 ರೂ. ಕಟ್ಟಿದಲ್ಲಿ ಮೇಲೆ ಹೇಳಿದಂತೆ ಪೂರ್ಣ ವಿಮೆ 6000 ರೂ. ಅಥವಾ ಆಂಶಿಕ ಮೊತ್ತವನ್ನು ನೀಡಲಾಗುವುದು.

6) ಗುಡಿಸಲುಗಳಿಗೆ ಬೆಂಕಿ ಅಪಘಾತ ವಿಮೆ : ಗುಡಿಸಲಿನ ಬೆಲೆ ನಿಷ್ಕರ್ಷೆ ಮಾಡಿ, ಪ್ರತಿ ಸಾವಿರ ರೂ. ಗೆ 3 ರೂ.ಗಳಂತೆ ವಿಮೆ ಕಂತು ವಿಧಿಸಲಾಗುತ್ತದೆ. ಬೆಂಕಿ ಆಕಸ್ಮಿಕವುಂಟಾದಲ್ಲಿ ನಿಷ್ಕರ್ಷೆ ಮಾಡಿದ್ದ ಪೂರ್ಣ ಮೊತ್ತದ ವಿಮೆ ನೀಡಲಾಗುವುದು.

7) ಗೋಬರ್ ಗ್ಯಾಸ್ ವಿಮೆ : ಗೋಬರ್ ಗ್ಯಾಸ್ ಘಟಕದ ಮೌಲ್ಯಕ್ಕನುಗುಣವಾಗಿ ಪ್ರತಿ ಸಾವಿರ ರೂ ಗೆ 1 ರೂ. ನಂತೆ ಬೆಂಕಿ ಅಪಘಾತದ ವಿರುದ್ಧ ವಿಮೆ ಮಾಡಿಸಬಹುದು.

ಹೀಗೆ ಇನ್ನೂ ಹಲವಾರು ವಿಮಾ ಸೌಲಭ್ಯಗಳಿವೆ. ಇವುಗಳ ಪ್ರಯೋಜನ ಹಾಗೂ ಈ ಬಗ್ಗೆ ಸಲಹೆ-ಮಾಹಿತಿ ಪಡೆಯ ಬಯಸುವವರು ಖುದ್ದಾಗಿ ಅಥವಾ ಪತ್ರ ಮೂಲಕ ಸಂಪರ್ಕಿಸಬಹುದು.

ವಿಳಾಸ :
ಎಂ. ಆರ್ ಸಂಪತ್ ಕುಮಾರ್,
ಅಭಿವೃದ್ಧಿ ಅಧಿಕಾರಿ,
ಯುನೈಟೆಡ್ ಇಂಡಿಯ ಇನ್ಸೂರೆನ್ಸ್ ಕಂ,
ಮೇಲಿನಪೇಟೆ, ಕೊಪ್ಪ.
ಫೋನ್ 131

ಕುವೆಂಪುರವರು ರೂಪಿಸಿದ ಸರಳ ವಿವಾಹ ವಿಧಾನ

'ಮಂತ್ರ ಮಾಂಗಲ್ಯ'

● ನಾ. ಮುರಳೀಧರ

ಮಾನವನ ಜೀವನದಲ್ಲಿ 'ಘಟಿಸಲೇಬೇಕಾದ ಘಟನೆ' ಎಂದು ಬಹುಮಟ್ಟಿಗೆ ಸರ್ವ ಸ್ವೀಕೃತವಾಗಿರುವ ವಿವಾಹವನ್ನು ಒಂದು ಬಂಧನ ಎನ್ನುವವರೂ ಇದ್ದಾರೆ. ಒಂದು ಬಾಂಧವ್ಯ ಎನ್ನುವವರೂ ಇದ್ದಾರೆ. 'ವಿವಾಹ ಏಕೆ?' ಎನ್ನುವ ವಿಚಾರದಲ್ಲಿಯೂ ಅಷ್ಟೇ; ನಾನಾ ರೀತಿಯ ಚಿಂತನೆಗಳಿವೆ. "ಗಂಡು – ಹೆಣ್ಣಿನ ದೈಹಿಕ ಸಂಪರ್ಕಕ್ಕೆ ಕಾನೂನು ನೀಡುವ ಪರವಾನಗಿ" ಎಂಬಂತಹ ಸಂಕುಚಿತ ದೃಷ್ಟಿಯಿಂದ ಹಿಡಿದು "ವಂಶೋದ್ಧಾರಕನನ್ನು ಪಡೆಯುವ ಮಾರ್ಗ" ಎಂಬಂತಹ ಅತಿ ಆದರ್ಶೀಕೃತ ದೃಷ್ಟಿಯವರೆಗೂ ಅದರ ಹರಹು ಇದೆ

"ವಿವಾಹವೆಂಬುದು ಮಾನವ ಜೀವಿಗೆ ಒಂದು ವರ; ಅದು ಒಬ್ಬ ಗಂಡು ಅಥವಾ ಹೆಣ್ಣು ಜೀವನ ಪರ್ಯಂತ ತಮ್ಮ ತೀರಾ ವೈಯಕ್ತಿಕ ವಿಚಾರಗಳನ್ನು ಹಂಚಿಕೊಳ್ಳಲು ಸಂಗಾತಿಯೊಬ್ಬರನ್ನು ಆಯ್ದುಕೊಳ್ಳುವ ವಿಶೇಷ ಸಂದರ್ಭ" ಎಂದು ಈ ಸಂದರ್ಭವನ್ನು ಕುರಿತು ವಿವರಿಸಲಾಗಿದೆ. ನಿಜ! ಕೆಲವೊಂದು ವಿಚಾರಗಳನ್ನು ನಾವು ಎಲ್ಲರೊಂದಿಗೂ ಹಂಚಿಕೊಳ್ಳುವುದು ಸಾಧ್ಯವಿಲ್ಲ. ಅಂತಹ ಸಂದರ್ಭದಲ್ಲಿ ವಿವಾಹ ನಮ್ಮ ಮನವೊಪ್ಪುವ ಸಂಗಾತಿಯ ಆಯ್ಕೆಗೆ ಒಂದು ಅವಕಾಶವಾದರೆ ಅದು ವರವಲ್ಲದೆ ಇನ್ನೇನು?

ಆದರೆ ಮುಂದಿನ ಪ್ರಶ್ನೆ: **ಈಗಿನ ಎಲ್ಲ ವಿವಾಹ ವಿಧಾನಗಳೂ ಎಲ್ಲರ ಪಾಲಿಗೂ ವರವೇ ಆಗಿವೆಯೇ?** ಎಂಬುದು. ಖಂಡಿತವಾಗಿಯೂ ಹಾಗೆ ಆಗುತ್ತಿಲ್ಲವೆಂಬುದಕ್ಕೆ ನಮ್ಮ ಕಣ್ಣೆದುರಿನ ವಿವಾಹಗಳು ಸಾಕ್ಷಿಯಾಗಬಲ್ಲವು. ಹೆತ್ತವರು ತಮ್ಮ ಮಕ್ಕಳ ವಿವಾಹಕ್ಕಾಗಿ ಪಡುವ ಪಾಡು ಯಾರಿಗೂ ಬೇಡ. ಕೇವಲ ಒಂದು ದಿನದ ಗೌಜು-ಗದ್ದಲಕ್ಕಾಗಿ ಅವರು ತಮ್ಮ ಜೀವನದ ಎಲ್ಲ ದುಡಿಮೆಯು ಜೊತೆಗೆ ಸಾಲಗಳೂ ಸೇರಿದ ಹತ್ತಾರು ಸಹಸ್ರ ರೂಪಾಯಿಗಳನ್ನು ಸುಡುತ್ತಾರೆ. ಇದರ ಫಲವಾಗಿ, ವಿವಾಹವಾದವರು ಹೆತ್ತವರ ಅಥವಾ ಈ ಸಾಲ-ಸೋಲಗಳ ಚಿಂತೆಯಲ್ಲೇ ದಿನ ದೂಡಿದರೆ, ಹೆತ್ತವರು ಜೀವಮಾನವಿಡೀ ಸಾಲದ ಶೂಲದಲ್ಲಿ ನರಳುತ್ತಾರೆ. ಆದ್ದರಿಂದಲೇ ದುಂದುಗಾರಿಕೆಯ ಈ ವಿವಾಹ ವಿಧಾನವನ್ನು ಕ್ಯಾನ್ಸರಿಗೆ ಹೋಲಿಸಲಾಗಿದೆ.

ಇಂತಹ ದುಂದುಗಾರಿಕೆಯ ವಿವಾಹಗಳನ್ನು ವಿರೋಧಿಸಿ ರಾಷ್ಟ್ರಕವಿ ಕುವೆಂಪು ಅವರು ಮಂತ್ರ ಮಾಂಗಲ್ಯವೆಂಬ ಹೊಸ ವಿಧಾನವನ್ನು ರೂಪಿಸಿದರು. ಇದನ್ನು 'ಸರಳ ವಿವಾಹ'ವೆಂದೂ ಗುರುತಿಸಲಾಗಿದೆ.

'ಮಂತ್ರ ಮಾಂಗಲ್ಯ'ವೆಂಬುದು ಕೇವಲ ಮಂತ್ರಗಳ ಸಂಕಲನವಲ್ಲ; ಅದೊಂದು ವಿವಾಹ ಪದ್ಧತಿ, ವಿಧಾನ. "ಅದು ವಧೂ-ವರರು ವಿವಾಹದ ಹೆಸರಿನಲ್ಲಿ ಪರಸ್ಪರ ಸೂರೆಗೆ ತೊಡಗುವುದನ್ನು ವಿರೋಧಿಸುತ್ತದೆ. ಅಲ್ಲಿ ಉಡುಪುಗಳ ಒಣ ಆಡಂಬರವಾಗಲೀ, ಕರ್ಣ ಕರ್ಕಶ ಸಂಗೀತವಾಗಲೀ, ಚಪ್ಪರ-ಮಂಟಪಗಳಾಗಲೀ ಇರುವುದಿಲ್ಲ. ವಧೂವರರು ಅವರ ತಾಯ್ತಂದೆಗಳು ಒಪ್ಪಿದ ದಿನ, ಪರಸ್ಪರರಿಗೆ ಅನುಕೂಲವಾಗುವ ಸ್ಥಳದಲ್ಲಿ, ಅವರಿಗೆಲ್ಲ ಇಷ್ಟವಾದ ಹಿರಿಯರ, ದೇವತೆಗಳ ಚಿತ್ರ ಸಾನ್ನಿಧ್ಯದಲ್ಲಿ ವಿವಾಹ ಮಾಡಿಕೊಳ್ಳುತ್ತಾರೆ. ಅಲ್ಲಿ ದೊಂಬಿ ಆಗುವುದಿಲ್ಲ ಆದಷ್ಟೂ ಕಡಿಮೆ ಸಂಖ್ಯೆಯಲ್ಲಿ ಜನರು-ಇಷ್ಟಮಿತ್ರರು ಸೇರುತ್ತಾರೆ ಅಲ್ಲಿ ವೇದೋಪನಿಷತ್ತುಗಳ ಶಾಂತಿ ಮಂತ್ರಗಳಿವೆ. ವಿಘ್ನವಿನಾಶಕ ಗಣೇಶನ ಸ್ತುತಿಯಿದೆ. ಆದರ್ಶ ದಂಪತಿಗಳೆನಿಸಿದ ಶ್ರೀ ರಾಮಕೃಷ್ಣ ಪರಮಹಂಸರು ಮತ್ತು ಶ್ರೀ ಮಾತೆ ಶಾರದಾದೇವಿಯವರನ್ನು ಕುರಿತ ಸ್ತೋತ್ರಗಳಿವೆ. ಈ ಸ್ತುತಿಗಳ ಮೂಲಕ, ನಾವು ಜೀವನದಲ್ಲಿ ಯಾವುದನ್ನು ಮೌಲ್ಯಗಳೆಂದು ತಿಳಿದಿರುತ್ತೇವೆಯೋ ಅಂತಹ ಶಕ್ತಿಗಳನ್ನು ವಧೂ-ವರರು ವಿವಾಹದ ಶುಭ ಗಳಿಗೆಯಲ್ಲಿ ಆಹ್ವಾನಿಸುತ್ತಾರೆ.

ಈ ಮಂತ್ರಗಳನ್ನು ಪುರೋಹಿತರೇ ಗಳಿಗೆಯಲ್ಲಿ ಆಹ್ವಾನಿಸುತ್ತಾರೆ.

ಈ ಮಂತ್ರಗಳನ್ನು ಪುರೋಹಿತರೇ ಉಚ್ಚರಿಸಬೇಕೆಂಬ ನಿಯಮವಿಲ್ಲ. ವಧೂ-ವರರು ಅಥವಾ ಅವರ ಗೆಳೆಯರು ಓದಬಹುದು. ಕೊನೆಯಲ್ಲಿ ವಧೂ-ವರರು ಹಾರ ವಿನಿಮಯ ಮಾಡಿಕೊಂಡ ನಂತರ ವರನು ದಾಂಪತ್ಯದ ಪ್ರೇಮನಿಷ್ಠೆಯ ಸಂಕೇತವಾಗಿ ವಧುವಿಗೆ ಮಾಂಗಲ್ಯ ಕಟ್ಟುತ್ತಾನೆ —ಇದು ಮಂತ್ರ ಮಾಂಗಲ್ಯದ ಸಂಕ್ಷಿಪ್ತ ವಿವರಣೆ.

"ಪರಸ್ಪರ ಪ್ರೀತಿ ವಿಶ್ವಾಸಗಳಿಲ್ಲದೆ, ಯಾವ ಶಾಸ್ತ್ರದ ಪ್ರಕಾರ ತಾಳಿ ಕಟ್ಟಿದರೂ, ಯಾವ ಅಗ್ನಿಯನ್ನು ಸುತ್ತಿದರೂ, ಎಷ್ಟು ಆಡಂಬರ – ವೈಭವಗಳಿಂದ ವಿವಾಹವಾದರೂ ಅದು ವ್ಯರ್ಥ"ವೆಂದು ಸಾರುವ ಸರಳ ವಿವಾಹ ವಿಧಾನ, ಸಹಸ್ರಾರು ವ[...] ದಿಯ ಬಾಳನ್ನು ಬೆಳಗಬೇಕೆಂಬುದು ಕುವೆಂಪು ಅವರ ಆಶಯ. ಈ ವಿವಾಹ ವಿಧಾನ ಇಂದಿನವರಿಗೆ ನಿಜಕ್ಕೂ ಅನುಕರಣೀಯ.

ಆದರೆ, ಇಂತಹ ವಿವಾಹಗಳನ್ನು ಮಾಡಿಕೊಳ್ಳುವವರು ಅಥವಾ ಮಾಡಿಸುವವರು ಅದನ್ನು ಪುರೋಹಿತಶಾಹಿಯ ವಿರುದ್ಧ ಒಂದು ಚಳುವಳಿಯೆಂದಾಗಲೀ, ಅಂತರ್ಜಾತಿವಾದದ ಬಾವುಟವೆಂದಾಗಲೀ ತೆಗೆದುಕೊಂಡು ಪ್ರದರ್ಶಿಸ ಹೊರಡುವುದು ಮತ್ತು ಅದನ್ನು ಒಂದು 'ವೇದಿಕೆ' ಮಾಡಿಕೊಳ್ಳಲು ಪ್ರಯತ್ನಿಸುವುದು, ಮಂತ್ರ ಮಾಂಗಲ್ಯದ ಮೂಲ ಉದ್ದೇಶವನ್ನೇ ಕುಲಗೆಡಿಸಿಬಿಡಬಹುದು.

(ಸೌಜನ್ಯ: ತೀರ್ಥಹಳ್ಳಿ, ಗ್ರಾಮಭಾರತಿ)

ಶೃಂಗೇರಿ ಕ್ಷೇತ್ರಕ್ಕೆ 10.80 ಲಕ್ಷ ರೂ. ವೆಚ್ಚದ

17 'ಸೇತು ಬಂಧನ' ಕಾಮಗಾರಿ ಮಂಜೂರು

ಕೊಪ್ಪ: ರಾಜ್ಯ ಸರ್ಕಾರದ 'ಸೇತು ಬಂಧನ' ಯೋಜನೆಯಲ್ಲಿ 1986–87ನೇ ಸಾಲಿನ ಅಂತ್ಯದಲ್ಲಿ ಶೃಂಗೇರಿ ಕ್ಷೇತ್ರದಲ್ಲಿ ಈ ಕೆಳಗಿನ ಸಣ್ಣ ಸೇತುವೆಗಳನ್ನು ಮಂಜೂರು ಮಾಡಿಸಿಕೊಂಡಿರುವುದಾಗಿ ಶಾಸಕ ಗೋವಿಂದ ಗೌಡರು 'ಮುಂಜಾವು'ಗೆ ತಿಳಿಸಿದ್ದಾರೆ. (ಒಟ್ಟು ಅಂದಾಜು ವೆಚ್ಚ 10 ಲಕ್ಷ 80 ಸಾವಿರ ರೂ.)

ನ. ರಾ. ಪುರ ತಾ||

ತರೀಕೆರೆ-ಮಂಗಳೂರು ರಸ್ತೆಯಿಂದ ಗುಬ್ಬಿಗದ ಮೂಲಕ ಹೆಮ್ಮೂರಿಗೆ ಹೋಗುವ ರಸ್ತೆಯ ಹಳ್ಳಕ್ಕೆ – 90,000; ಹೊಸಕೆರೆ ಸಮೀಪದ ಹಳ್ಳಕ್ಕೆ – 90,000; ತುಪ್ಪೂರು ಬಳಿಯ ಹಳ್ಳಕ್ಕೆ – 30,000; ಮಲ್ಲಿಕೊಪ್ಪ ರಸ್ತೆಯಲ್ಲಿ–50,000; ಗದ್ದೆಕೆರೆ ಹಳ್ಳಕ್ಕೆ–50,000; ಬಿ. ಎಚ್. ಕೈಮರದಿಂದ ಕುದ್ರೆಗುಂಡಿ–ಮುತ್ತಿನಕೊಪ್ಪ ರಸ್ತೆಗೆ ಗುಬ್ಬಿಗ, ಹೆಮ್ಮೂರು ಮಾರ್ಗವಾಗಿ ಹೋಗಿ ಸೇರುವ ರಸ್ತೆಯಲ್ಲಿ – 40,000.

ಕೊಪ್ಪ ತಾ||

ಬಿಳಾಲುಕೊಪ್ಪ–ಕಲ್ಲುಗುಡ್ಡೆ ರಸ್ತೆಯ ನಾಗರಗುಂಡಿ ಹಳ್ಳಕ್ಕೆ–90,000; ಬೆಳವಿನಕೊಡಿಗೆ ಗ್ರಾಮದ ಕಿಕ್ರೆ–ಹುರಳಿಹಕ್ಲು ರಸ್ತೆಯ ಎತ್ತಿನಹಟ್ಟಿ ಹಳ್ಳಕ್ಕೆ–90,000; ಚಾವಲ್ಮನೆ–ತೀರ್ಥಮುತ್ತೂರು ರಸ್ತೆಯ ಮಲಿಗೆಮನೆ ಹಳ್ಳಕ್ಕೆ–90,000; ಹಿರೇಕೊಡಿಗೆ ಬಳಿ ಶೆಟ್ಟಿಹಡ್ಲು ಹಳ್ಳಕ್ಕೆ–50,000; ಶಿರಕರಡಿ–ಶಂಕರಮನೆ ರಸ್ತೆಯ ಹಳ್ಳಕ್ಕೆ (ಚಾವಲ್ಮನೆ)–50,000; ತಲಮಕ್ಕಿ ಗ್ರಾಮದ ರಾಗೋಡು ಹಳ್ಳಕ್ಕೆ –30,000; ಸಿಲುವಾಗಿಲು ಬಳಿ ಬಿಕ್ಕಳಿ ಹಳ್ಳಕ್ಕೆ–50,000.

ಶೃಂಗೇರಿ ತಾ||

ಬೇಗಾರು–ಕೆ. ಮಸಿಗೆ ರಸ್ತೆಯ ಹಳ್ಳಕ್ಕೆ (19.4.87ರ 'ಮುಂಜಾವು' ನೋಡಿ) –90,000; ಕುಂಚೆಬೈಲು–ನೆಮ್ಮಾರು ರಸ್ತೆಯ 3ನೇ ಕಿ.ಮೀ ಬಳಿಯ ಹಳ್ಳಕ್ಕೆ

(4ನೇ ಪುಟಕ್ಕೆ)

ಲ್ಲಾ ಪತ್ರಕರ್ತರ ಸಂಘದ ನೂತನ ಪದಾಧಿಕಾರಿಗಳು

ಬಾಳೆಹೊನ್ನೂರು : ಇಲ್ಲಿ ಮೇ 3 ರಂ ನಡೆದ ಜಿಲ್ಲಾ ಪತ್ರಕರ್ತರ ಸಂಘದ ರ್ಷ ಸದಸ್ಯರ ಸಭೆಯಲ್ಲಿ ಆಯ್ಕೆಯಾದ ತನ ಪದಾಧಿಕಾರಿಗಳು:

ಸ್.ಎಸ್. ಚಂದ್ರಶೇಖರ್ (ಅಧ್ಯಕ್ಷರು) ಎಚ್. ನಾರಾಯಣ, ರಾಜಗೋ ಲ ಗುಪ್ತ (ಉಪಾಧ್ಯಕ್ಷರು), ಎಸ್.ಜಿ. ಷ್ಣಮೂರ್ತಿ (ಪ್ರ. ಕಾರ್ಯದರ್ಶಿ), ನೇಶ್ ಪಟವರ್ಧನ್, ಅನಂತ ನಾಡಿಗ್ ಕಾರ್ಯದರ್ಶಿಗಳು) ಬಿ.ಎಸ್ ವಿದ್ಯಾನಂದ ಟ್ (ಖಜಾಂಚಿ)

ಕಾರ್ಯಕಾರಿ ಸಮಿತಿ ಸದಸ್ಯರು

ರೇವಣ್ಣ, ಗಿರೀಶ್ ಮಾವಿನಕಾಡು, ಂ. ಎನ್. ಚಂದ್ರಶೇಖರ್, ಸಿರಿಮನೆ ಾಗರಾಜ್, ಕಲ್ಕುಳಿ ವಿಠಲ ಹೆಗ್ಡೆ, ಯೋ ನರಸಿಂಹ, ಬಾಲಕೃಷ್ಣ, ಶಂಕರನಾರಾ ಣ ಭಟ್. ಎ. ಎಸ್. ಮಂಜುನಾಥ, ಂ.ಆರ್. ನಜೀರ್, ಕೃಷ್ಣರಾಜ್, ವಿ.ಹಿ ಮಣ್ಣ, ಎಚ್. ಸಿ. ವೆಂಕಟರಾಮಯ್ಯ.

ಅಂಗನವಾಡಿ ಕಾರ್ಯಕರ್ತೆಯರ ಧರಣಿ

ಕೊಪ್ಪ: ಈ ತಾಲ್ಲೂಕಿನಲ್ಲಿ ಯಾವುದೇ ಅಂಗನವಾಡಿ ಕೇಂದ್ರಗಳನ್ನೂ ಮುಚ್ಚ ಬಾರದು; ಕಾರ್ಯಕರ್ತೆಯರ ಮತ್ತು ಸಹಾ ಯಕಿಯರ ಗೌರವ ಧನವನ್ನು ಜಾಸ್ತಿ ಮಾ ಡುವುದರೊಂದಿಗೆ ಈ ಎಲ್ಲಾ ಕಾರ್ಯಕರ್ತೆ ಯರನ್ನೂ ಸರ್ಕಾರಿ ನೌಕರರೆಂದೇ ಪರಿಗಣಿ ಸ ಬೇಕು; ಎಲ್ಲಾ ಅಂಗನವಾಡಿ ಕೇಂದ್ರ ಗಳಲ್ಲೂ ಮಕ್ಕಳಿಗೆ ಸರ್ಕಾರಿ ಶಾಲೆಗಳಲ್ಲಿ ನೀಡುತ್ತಿರುವ ಸೌಲಭ್ಯಗಳಂತೆ ಸಮವಸ್ತ್ರ ಹಾಗೂ ಇನ್ನಿತರ ಎಲ್ಲಾ ಸೌಲಭ್ಯಗಳನ್ನೂ ಒದಗಿಸಬೇಕು ಎಂದು ಸರ್ಕಾರಕ್ಕೆ ಒತ್ತಾ ಯಿಸಿ ಅಂಗನವಾಡಿ ಕಾರ್ಯಕರ್ತೆಯರು ಇಂದು ಬಾಲವಿಕಾಸ ಯೋಜನಾಧಿಕಾರಿ ಗಳ ಕಚೇರಿಯೆದುರು ಧರಣಿ ನಡೆಸಿದರು.

ಅವರ ಮನವಿ ಪತ್ರಗಳನ್ನು ಪಡೆದ ನೂತನ ಬಾಲವಿಕಾಸ ಯೋಜನಾಧಿಕಾರಿ ರುದ್ರಪ್ಪ ಅವರು, ಹಲವು ಕೇಂದ್ರಗಳಲ್ಲಿ ಅತಿ ಕಡಿಮೆ ಹಾಜರಾತಿ ಇರುವುದನ್ನು ಪ್ರಸ್ತಾಪಿಸಿ, ಕಡೇಪಕ್ಷ ಶೇ. 75 ರಷ್ಟಾದರೂ ಹಾಜರಾತಿ ಇರುವಂತೆ ಕಾರ್ಯಕರ್ತೆ ಯರು ಪ್ರಯತ್ನಿಸಬೇಕೆಂದೂ ಇದಕ್ಕೆ ತಾ ನು ಕೂಡ ಸಂಪೂರ್ಣವಾಗಿ ಸಹಕಾರ ನೀ ಡುವುದಾಗಿಯೂ, ಹಾಗೆ ಅಪೇಕ್ಷಿತ ಉದ್ದೇ ಶದಂತೆ ನಡೆಯಲಾರದ ಕೇಂದ್ರಗಳನ್ನು ಮುಚ್ಚುವುದು ಅನಿವಾರ್ಯವಾಗುತ್ತದೆಂ ದೂ ತಿಳಿಸಿದರು.

ಆದರೆ ಹಾಗೆ ಮುಚ್ಚುವ ಮುಂಚೆ ಸಾ ಕಷ್ಟು ಕಾಲಾವಕಾಶ ನೀಡಿ ತಿಳಿಸುವುದಲ್ಲ ದೆ, ಸ್ಥಳೀಯ ಪಂಚಾಯ್ತಿ ಪ್ರಧಾನರು. ಸದಸ್ಯರುಗಳು ಹಾಗೂ ಜನರ ಜೊತೆಗೆ ಸಂಪರ್ಕ ಸಭೆ ನಡೆಸಿ ಕೇಂದ್ರವನ್ನು ಉಳಿಸಿ ಕೊಳ್ಳಲು ಅವರೆಲ್ಲ ತಮ್ಮ ಪ್ರಯತ್ನವನ್ನು ಕೂಡ ವಿನಿಯೋಗಿಸುವಂತೆ ಮನವಿ ಮಾ ಡುವುದಾಗಿಯೂ ಅವರು ಭರವಸೆ ನೀಡಿದ ರು. ಇಷ್ಟಾಗಿಯೂ ಕೆಲವು ಕೇಂದ್ರಗಳನ್ನು ಮುಚ್ಚಲೇ ಬೇಕಾಗಿ ಬಂದಲ್ಲಿ ಅಲ್ಲಿನ ಕಾ ರ್ಯಕರ್ತೆಯರನ್ನು ವಜಾ ಮಾಡದೆ ಬೇರೆ ಕಡೆಗಳಲ್ಲಿ ನೇಮಿಸಿಕೊಳ್ಳುವುದಾಗಿಯೂ ಭರವಸೆಯಿತ್ತ ಅವರು, ಉಳಿದ ಮನವಿಗಳನ್ನು ಮೇಲಧಿಕಾರಿಗಳ ಗಮನಕ್ಕೆ ತರುವುದಾಗಿ ತಿಳಿಸಿದರು.

ಕಾರ್ಯಕರ್ತೆಯರು ತಮ್ಮೆಲ್ಲ ಪ್ರಯತ್ನಗಳನ್ನು ತೊಡಗಿಸಿ ಕೇಂದ್ರಗಳ ಹಾಜ ರಾತಿ ಸುಧಾರಿಸಿ ಅವನ್ನು ಉಳಿಸಿಕೊಳ್ಳಲು ಶ್ರಮಿಸುವ ಭರವಸೆ ನೀಡಿದ ಪ್ರಧಾನ ಕಾ ರ್ಯದರ್ಶಿ ಎ. ಆರ್. ರಾಮಚಂದ್ರ, ಸಂ ಘದ ಮನವಿಯನ್ನು ಸಹಾನುಭೂತಿಯಿಂದ ಪರಿಶೀಲಿಸಿದ್ದಕ್ಕಾಗಿ ಬಾಲವಿಕಾಸ ಯೋಜ ನಾಧಿಕಾರಿಗಳಿಗೆ ಕೃತಜ್ಞತೆ ಸಲ್ಲಿಸಿದರು.

ಗೆಳೆಯರ ಬಳಗಕ್ಕೆ ಸ್ವಂತ ರಂಗಮಂದಿರ

(ವರದಿ: ಕಲ್ಕುಳಿ ವಿಠಲ ಹೆಗ್ಡೆ)

ವೈಕುಂಠಪುರ : ಇಲ್ಲಿನ ಗೆಳೆಯರ ಬಳಗ ಯುವಕ ಸಂಘವು ಸರ್ಕಾರದ 10 ಸಾವಿರ ರೂ. (ಸಮ ಅರ್ಧ) ನೆರವಿನೊಂದಿಗೆ ಸಾ ರ್ವಜನಿಕರ ವಂತಿಗೆಯಿಂದ ಕಟ್ಟಿಸಿರುವ 'ಪ್ರಕೃತಿ' ರಂಗ ಮಂದಿರವನ್ನು ಜಿಲ್ಲಾ ಪ ರಿಷತ್ ಉಪಾಧ್ಯಕ್ಷ ಬಿ. ಸೋಮಶೇಖರಪ್ಪ ಮೇ 5 ರಂದು ಉದ್ಘಾಟಿಸಿದರು.

ಇದೇ ಸಂದರ್ಭದಲ್ಲಿ ಮೇ 5 ಮತ್ತು 6 ರಂದು ಯುವಕ ಸಂಘದ ವಾರ್ಷಿಕೋತ್ಸವ ವು ಉತ್ತಮ ಸಾಂಸ್ಕೃತಿಕ ಮತ್ತು ಮನ ರಂಜನಾ ಕಾರ್ಯಕ್ರಮಗಳೊಂದಿಗೆ ನೆರ ವೇರಿತು.

ತಾಲ್ಲೂಕಿನಲ್ಲೇ ಉತ್ತಮ ಹೆಸರು ಗಳಿಸಿದ್ದು, ಜಿಲ್ಲಾ ಮತ್ತು ವಿಭಾಗ ಮಟ್ಟಗಳಲ್ಲಿ ಹಲವು ಪ್ರಶಸ್ತಿಗಳನ್ನು ಸಹ ಪಡೆದಿರುವ ಈ ಸಂಘವನ್ನು ಈ ಸಮಾರಂಭಗಳಲ್ಲಿ ಭಾಗ ವಹಿಸಿದ್ದ ಅತಿಥಿಗಳು ಶ್ಲಾಘಿಸಿದರು. ಅಲ್ಲದೆ ಸಂಘವು ಸಾಂಸ್ಕೃತಿಕ ಕಾರ್ಯಕ್ರಮ ಗಳಲ್ಲಿ ಮಾತ್ರವಲ್ಲದೆ ಅಭಿವೃದ್ಧಿ ಮತ್ತು ಸಾಮಾಜಿಕ ಕಾರ್ಯಕ್ರಮಗಳಲ್ಲಿ ಸಹ ಸ ಕ್ರಿಯವಾಗಿ ಪಾಲ್ಗೊಳ್ಳುವಂತೆ ಕರೆ ನೀಡಿ ದರು.

ರಂಗಮಂದಿರದ ಕಟ್ಟಡಕ್ಕೆ 10,000 ರೂ. ಸಾರ್ವಜನಿಕ ವಂತಿಗೆಕೂಡಿಸುವ ಜ ವಾಬ್ದಾರಿ ಹೊತ್ತಿದ್ದಲ್ಲದೆ ಕಟ್ಟಡದ ನಿ ರ್ಮಾಣ ಕಾರ್ಯವನ್ನು ಸಹ ಉತ್ತಮ ವಾಗಿ ನಿರ್ವಹಿಸಿದ ಸಂಚಾಲಕ ನಾಗೇಶ್ ರನ್ನು ಗೌರವಿಸಲಾಯಿತು.

ಶೃಂಗೇರಿಯ ಸರ್ಕಾರಿ ರಂಗ ಮಂದಿರಕ್ಕೆ ಶಂಕುಸ್ಥಾಪನೆಯಾಗಿ 6 ತಿಂಗಳಾದರೂ ಅದರ ಸುದ್ದಿಯಿಲ್ಲದಿರುವಾಗ ಈ ಸಂಘದ ರಂಗ ಮಂದಿರ ಒಂದೇ ತಿಂಗಳಲ್ಲಿ ನಿರ್ಮಾ ಣಗೊಂಡ ಬಗ್ಗೆ ಮೆಚ್ಚುಗೆ ವ್ಯಕ್ತವಾಯಿ ತು. ಯುವಕ ಸಂಘವೊಂದು ಸ್ವಂತ ರಂಗ ಮಂದಿರ ಹೊಂದುತ್ತಿರುವುದು ತಾ॥ ನಲ್ಲಿ ಇದೇ ಮೊದಲನೆಯದಾಗಿದೆ.

ಶಿವಮೊಗ್ಗ ಅಡಿಕೆ ಧಾರಣೆ

ತಾ॥ 14.5.987

ಸರಕು : 3900 – 4525
ಬೆಟ್ಟೆ : 2600 – 3050
ಗೊರಬಲು : 772

ಸಾಗರ ಅಡಿಕೆ ತಾ॥ 12.5.87

ಇಡಿ ಅಡಿಕೆ ರೂ. 1750–1999
ಆಪಿ ರೂ. 3689–3909
ಚಾಲಿ ರೂ. 1109–1330
ಸಿಪ್ಪೆ ಗೋಟು ರೂ. 370–558
ಮೆಣಸು ರೂ. 5259

ಏಲಕ್ಕಿ ಮತ್ತು ಮೆಣಸು ವ್ಯಾಪಾರ

ಶಿವಮೊಗ್ಗ : ಮಲೆನಾಡು ಅಡಿಕೆ ಮಾ ರಾಟದ ಸಹಕಾರ ಸಂಘದವರು ಶಿವಮೊಗ್ಗ ನಿಯಂತ್ರಿತ ಮಾರುಕಟ್ಟೆ ಆವರಣದಲ್ಲಿರುವ ತಮ್ಮ ಹರಾಜು ಅಂಗಳದಲ್ಲಿ ದಿನಾಂಕ : 23.5 1987ನೆ ಶನಿವಾರ ದೊಡ್ಡ ಪ್ರಮಾ ಣದಲ್ಲಿ ಏಲಕ್ಕಿ ಮತ್ತು ಮೆಣಸಿನ ವ್ಯಾಪಾ ರದ ವ್ಯವಸ್ಥೆ ಮಾಡಿದ್ದಾರೆ. ಬೆಳೆಗಾರರು ಇದರ ಲಾಭ ಪಡೆದುಕೊಳ್ಳಬೇಕಾಗಿ ಕೋ ರಲಾಗಿದೆ.

ದಿನಾಂಕ 18.4.87ರಂದು ನಡೆದ ಏಲಕ್ಕಿ ವ್ಯಾಪಾರದ ಧಾರಣೆ :

ಉತ್ತಮ ರಾಶಿ ಕಾಯಿ	100–150
ರಾಶಿ ಕಾಯಿ	90–130
ಸಾಧಾರಣ ಕಾಯಿ	30–105

'ಸೇತು ಬಂಧನ' ಕಾಮಗಾರಿ ಮಂಜೂರು

(3ನೇ ಪುಟದಿಂದ)

–90,000; ಹಾದಿ ಮಾತೊಳ್ಳಿ ರಸ್ತೆಯ ಹಳ್ಳಕ್ಕೆ–50,000; ದುರ್ಗಾದೇವಸ್ಥಾನ ರಸ್ತೆಯ ಹಳ್ಳಕ್ಕೆ –50,000.

(ಕಾಮಗಾರಿಗಳನ್ನು ಮಂಜೂರು ಮಾ ಡಿಸಿಕೊಂಡಿರುವ ಬಗೆ ಆಯಾ ಹಳ್ಳಿಗಳವರ ಪರವಾಗಿ ಶಾಸಕರನ್ನು ಅಭಿನಂದಿಸುತ್ತಾ, ಈ ಕಾಮಗಾರಿಗಳು ಬೇಗನೆ ಆರಂಭವಾಗಿ ಮಧ್ಯೆ ಮರ್ಷಗಟ್ಟಲೆ ನಿಲ್ಲದೆ ಬೇಗನೆ ಮು ಕ್ತಾಯವಾಗಲು ಸಿಮೆಂಟ್ ಮತ್ತು ಹಣದ ಕೊರತೆ ಉಂಟಾಗದಂತೆಯೂ ಶಾಸಕರು ತಮ್ಮ ಗಮನ ಇರಿಸುವುದು ಅಗತ್ಯವೆಂಬ ಜನತೆಯ ಕಿವಿ ಮಾತನ್ನು ಸಹ 'ಮುಂ ಜಾವು' ಅವರ ಗಮನಕ್ಕೆತರಬಯಸುತ್ತದೆ —ಸಂ.)

ವೈಕುಂಠ ಸಮಾರಾಧನಾ ಆಹ್ವಾನ ಪತ್ರಿಕೆ

ಶ್ರೀಯುತ ಮೇಲ್ಪಾಲ್ ಕೆ. ಟಿ. ವೆಂಕಟರಮಣಯ್ಯನವರು ದಿನಾಂಕ: 13. 5.1987ನೇ ಬುಧವಾರ ರಾತ್ರಿ 8–45ಕ್ಕೆ ಸ್ವರ್ಗಸ್ಥರಾದರೆಂದು ತಿಳಿಸಲು ವಿಷಾದಿಸು ತ್ತೇವೆ. ತತ್ಸಂಬಂಧ ಮೃತರ ವೈಕುಂಠ ಸಮಾರಾಧನೆಯನ್ನು ದಿನಾಂಕ: 26.5. 1987ನೇ ಮಂಗಳವಾರದಂದು ನಮ್ಮ ಸ್ವಗೃಹದಲ್ಲಿ ನಡೆಸಲು ನಿಶ್ಚಯಿಸಿದೆ. ದಿವಂಗತ ರ ದಿವ್ಯ ಆತ್ಮಕ್ಕೆ ಪರಮಾತ್ಮನು ಚಿರಶಾಂತಿಯನ್ನು ಕರುಣಿಸಲೆಂದು ಪ್ರಾರ್ಥಿಸುವ,

ಶ್ರೀಮತಿ ವೆಂಕಮ್ಮ (ಪತ್ನಿ)
ಎಂ.ವಿ. ಶಂಕರ್ ಮತ್ತು
ಸಹೋದರರು, ಸಹೋದರಿಯರು
ಕೆ. ಟಿ. ಪದ್ಮನಾಭಯ್ಯ, ಕೆ. ಟಿ. ರಾಮಕೃಷ್ಣಯ್ಯ,
ಮೇಲ್ಪಾಲು

ಸಂಪಾದಕ, ಮುದ್ರಕ ಮತ್ತು ಪ್ರಕಾಶಕ: ಸಿರಿಮನೆ ನಾಗರಾಜ್, ಅಚ್ಚು: ದೀಪಿಕೆಗೆ ಅಚ್ಚು ಕೂಟ, ಕೊಪ್ಪ.